ಮೈಸೂರ ಗೆಜೆಟ್.

ನಂ. 12 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1890.

ಬೆಂಗಳೂರು, ಶನಿವಾರ, ಮಾರ್ಚಿ ತಾ|| 29, ಸನ್ 1890.

ಟಿಪ್ಪಣಿ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಆಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಜ್ಞೆಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್

ಇಸ್ತಿಹಾರ್‌ನಾಮೆ.

ತಾರೀಖು 1ನೇ ಮಾರ್ಚಿ 1890.

ನಂ. 359.—ಸನ್ 1881ನೇ ಇಸವಿಯ XXIIನೇ ನಂಬರ್‌ಳ್ಳ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನಿನ G ಕಾಜ್‌ನಲ್ಲಿ ವಿಧಿಸೋಣಾದ ನಿಬಂಧನೆಗಳನ್ನನುಸರಿಸಿ ಇದರಡಿ ನಮೂದಾಗುವ ನಿಯಮವು "ಚಿಲ್ಲರೆ ಸಾರಾಯಿ ಬಿಕರಿಯ ಲೈಸೆನಿನಲ್ಲಿ" 9 (a)ನೇ ನಿಬಂಧನೆಯಾಗಿ ಕೇರಿಸಲ್ಪಡತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಇದರಿಂದ ಅಪ್ಪಣೆ ಕೊಡಿಸಿರುತ್ತಾರೆ.

9 (a)—ಪರಾಬ್ ಬಿಕರಿಯಾಗುವ ದುಕಾನಿನಲ್ಲಾಗಲಿ ಯಾ ಲೈಸೆನ್ಸದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ, ಯಾ ಅಂಥಾವನ ದುಕಾನಿನ ನವಕರರ ಬಳಿಯಲ್ಲಾಗಲಿ ಅಥವಾ ಅವರ ಸ್ವಾಧೀನದಲ್ಲಾಗಲಿ, ಪರಾಬ್ ವಿನಾ ಇತರ ಯಾವ ನೀರೇ ಆಗಲಿ ಯಾ ಸಾರಾಯಿ ಯೆಷ್ಟು ಮಟ್ಟಿಗೂ ಇರತಕ್ಕದ್ದಲ್ಲವು.

ತಾರೀಖು 22ನೇ ಫಿಬ್ರವರಿ 1890.

ನಂ. 348.—ಸಕಲ ಜನಗಳಿಗೂ ತಿಳಿಯುವಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಿಗೆದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಬೇ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಯಾವದೂ ಇಲ್ಲದೆ ಗ್ರಾಮವು ಚಡ್ಡರಖಾಸು-ದಾರರಿಗೆ ಹರಾಜ್ ನಿಲ್ಲುವದು

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಯಿಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜ್ ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಟಿಂಬ ಇತರ ಯಾವ ದುನ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ಸೇರಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿ ಆಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾಧ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಈದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲನೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖ್ಯೆರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್. ತಾಲ್ಲೂಕ್. ಹೋಬಳಿ.	ಗ್ರಾಮ.	ಕಾಯಂ ಗುತ್ತಿಗೇದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಪೈರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರ್ಕಾರದ ಕಂದಾಯದ ಬಾಕಿ.	ಹರಾಜ್ ತಾರೀಖು ವಗೈರೆ.
ಮೈಸೂರು ಮೈಸೂರು ಹಿಂದಿನ	ಕಾಯಂಗುತ್ತಾ ಉಡಬೂರು	ಬಸವರಾಜಯ್ಯ	ಖಂ. ಕೊ. ಪ. 0 0 0	ರೂ. ಆ. ಪೈ. 1358 14 6	ರೂ. ಆ. ಪೈ. 1265 5 7	ರೂ. ಆ. ಪೈ. 927 9 7 ಮತ್ತು ಬಡ್ಡಿ	1890ನೇ ಇಸವಿ ಏಪ್ರಿಲ್ ತಾರೀಖು 1ರಲ್ಲು ತಾಲ್ಲೂಕ್ ಕಚೇರಿಯಲ್ಲಿ ಅವ್ವಲ್‌ದಾರ್ರ ರೂಬರೂ.

ಪರಾ—ಕಾಯಂಗುತ್ತಾದಾರರುಗಳೆಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ ದೇಣಿಗೆಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 3ನೇ ಮಾರ್ಚಿ 1890.

ನಂ. 353.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಜಪ್ತಿ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಬಂದು ಗ್ರಾಮವು ಜೇರೆಜೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೇ ಪೇರೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಜೇರೆಜೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೀಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಾಗಿ ಪೂವತಿ ಮಾಡವೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪೂವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಸುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀ ಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂ ದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪೂವತಿಯಾಗಿರುತ್ತೆಂ ದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುವುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ಪತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪೂವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಕೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದ ಜ್ಞಾಗಲಿ, ಇರುವ ಗಲ್ಲತಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗ.ವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿ ವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುರಕಾರಕ್ಕೆ ಕೊಟ್ಟುವಳ್ಳೇ ಯಾಡಬೇಕಾದ ಕ್ವಿಟೆರೆಂಟ್.	ಸಾಲಿಯಾನಾ ಸ ಬೇರೀಜ್.	ಯಾವ ಬಾಕಿಗೋ ಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರ್ಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರ.
				ಎ. ಗುಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ದೇವನಹಳ್ಳಿ.	ಕಟ್ಟಹಳ್ಳಿ ಜೋಡಿಗ್ರಾಮ.	ಮೂರ್ತಾಚಾರ್ ವಗೈರೆ.	779 26	501 0 0	80 0 0	269 3 4 ಮತ್ತು ಬಡ್ಡಿ	1890ನೇ ಇಸವಿ ಏಪ್ರಿಲ್ ತಾರೀಖಿ 9ರಲ್ಲು ತಾಲ್ಲೂಕ ಕಛೇರಿಯಲ್ಲಿ ಅಮಲ್‌ದಾರ್ರ ರೂಬರೂ
	ನೆಲಮಂಗಲ.	ಬುರಗುಂಟಿ ಕಾಯಂಗುತ್ತಾ ಗ್ರಾಮ.	ಬಾಬೂರಾವ್	ಖಂ. ಕೂ. ಪ. 16 18 8	134 8 4	121 0 0	124 12 7 ಮತ್ತು ಬಡ್ಡಿ	ಡಿಟೋ

ಸೂಚನೆ.—ಜೋಡಿ ವ ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ ಉಂಟುಮಾಡಲ್ಪಟ್ಟು ತಮಾಂ ಹಿಡುವಳಿ ಯಾ ದೇಣಿಗೆಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲೀ ಸದರೀ ಹರಾಜು ವಳಪಟ್ಟಿರುವದಿಲ್ಲ.

233

ತಾರೀಖು 1ನೇ ಮಾರ್ಚ್ 1890.

ನಂ. 355.—(1888ನೇ ಇಸವಿಯ 4ನೇ ರೆಗ್ಯುಲೇಷ್ನ್ ಯಂಬ) ಮೈಸೂರು ಲ್ಯಾಂಡ್ ರೆವಿನ್ಯು ಕೋಡಿನ 236ನೇ ಸೆಕ್ಷನಿನ 2ನೇ ಕಲಮನುಸರಿಸಿ ಮೈಸೂರು ಡಿಸ್ಟ್ರಿಕ್ಟ್ ನೈಕಿ ನಂಜನಗೂಡು ತಾಲ್ಲೂಕಿನಲ್ಲಿರುವ ಇದರಡಿ ನಮೂದಾಗುವ ಪರಭಾರೆಯಾದ ಗ್ರಾಮಗಳಿಗೆ ಸದರೀ ಕೋಡಿನ 8 ವ 9ನೇ ಚಾಪ್ಟರುಗಳ ನಿಬಂಧನೆಗಳು ಲಗಾವಾಗಿರತಕ್ಕದ್ದೆಂದು ಮೈಸೂರು ಶೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡಿಸಿರುತ್ತಾರೆ.

1 ವಳಗೆರೆ. 2 ಕಣಿಪುರ. 3 ಮಾದಾಪುರ.

ಆರ್ಡರ್ ನಂಬರ್ 9591—8—210 ತಾರೀಖು 8ನೇ ಮಾರ್ಚ್ 1890ನೇ ಇಸವಿ.

1888ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ನಡದ ಪ್ರಜಾ ಪ್ರತಿನಿಧಿಗಳ ಸಭೆಯ ಪ್ರೊಸೀಡಿಂಗ್ಸ್‌ನಲ್ಲಿ ಮೊಹತರ್ಫಾ "ಮನೆ" ತೆರಿಗೆ ದಾಖಲ್ಮಾಡುವ ವಿಷಯದಲ್ಲಿ ದಿವಾ ಸಾಹೆಬರವರಿಂದ ಮಾಡಲ್ಪಟ್ಟ ಮಾರ್ಜಿನ್ನಲ್ಲಿ ಕಾಣಿಸಿರುವ ಷರಾ ಹುಕುಂನಂತೆ ಚಾಲ್ತೀ

ರೈತರುಗಳಿಗೆ ವಾಸವಾಗಿರುವ ಗ್ರಾಮಗಳಲ್ಲಿ ಭೂಮಿ ಇಲ್ಲದೆ ಆಸ್‌ಪಾಸ್ ಗ್ರಾಮಗಳಲ್ಲಿ ಭೂಮಿ ಇದ್ದಾಗ್ಯೂ ಕೂಡ ಮೊಹತರ್ಫಾ ಮನೆ ತೆರಿಗೆ ದಾಖಲ್ಮಾಡುತ್ತಾರೆಂತ ಹೇಳಿ ಕೊಂಡದ್ದಕ್ಕೆ 'ಬಂದು ತಾಲ್ಲೂಕು ಅಥವಾ ಡಿಸ್ಟ್ರಿಕ್ಟಿನಲ್ಲಿ ರೈತನು ಯಿದ್ದುಕೊಂಡು ಇನ್ನೊಂದು ತಾಲ್ಲೂಕು ಅಥವಾ ಡಿಸ್ಟ್ರಿಕ್ಟಿನಲ್ಲಿ ಜಮ್ಮಾ ಹಿಡುವಳಿ ಇದ್ದ ಮಾತ್ರಕ್ಕೇನೆ ಮನೆ ಕಂದಾಯ ಮಾಫ್ ಆಗಲಾರದೆಂತಲೂ ಆದರೆ ರೈತರಿಗೆ ತಮ್ಮ ಜಮ್ಮಾ ಇರುವ ಗ್ರಾಮದಲ್ಲಿ ಮನೆ ಕಟ್ಟಿಕೊಳ್ಳುವದಕ್ಕೆ ನಿವೇಶನ ದೊರಕದೆ ಇದ್ದ ಪಕ್ಷದಲ್ಲಿ ಅಥವಾ ಅದು ಬೇಟಿರುವ ಗ್ರಾಮವಾದ ಪಕ್ಷದಲ್ಲಿ ಜಮಾಬಂದಿ ಅಧಿಸರುಗಳು ಮನೆ ಕಂದಾಯವನ್ನ ಮಾಫ್ ಮಾಡಬಹುದೆಂದು ದಿವಾ ಸಾಹೆಬರವರು ಆಪ್ಪಣೆ ಕೊಟ್ಟದ್ದಕ್ಕೆ ಪ್ರತಿನಿಧಿಗಳು ತಮ್ಮ ಕೋರಿಕೆ ಸರವೇರಿತೆಂದು ಹೇಳಿದರು.

ಸಾಲ್ ಜನಮಾಬಂದಿ ಕಾಲದಲ್ಲಿ ಡೆಪ್ಯುಟಿ ಕಮ್ಮಿಷನರುಗಳು ಜಾರಿಯಲ್ಲಿ ತರಬೇಕೆಂದು ಕೇಳಿ ಕೊಳ್ಳಲ್ಪಟ್ಟಿದೆ

2. ಇತಃಪರ ಈ ಕೆಳಗೆ ನಮೂದಾಗುವ ನಿಷ್ಕರ್ಷೆಯಾದ ನಿಬಂಧನೆಯಂತೆ ಜಾರೀಯಲ್ಲಿ ತೆರಬೇಕು, ಯೇನೆಂದರೆ:—

"ಒಬ್ಬ ರೈತ ಯಾವ ಕಾರಣದಿಂದಲೇ ಆಗಲಿ ತನಿಗೆ ಜಮ್ಮಾನು ಯಿಲ್ಲದ ಗ್ರಾಮದಲ್ಲಿ ವಾಸ ಮಾಡುತ್ತಾ ಯಿದ್ದರೆ ಆ ಗ್ರಾಮಕ್ಕೆ 5 ಮೈಲಿಗಳಿಗಿಂತ ಹೆಚ್ಚಾದ ಫಾಸಲೆ ಯಿಲ್ಲದ ಬಾಜೂ ಗ್ರಾಮದಲ್ಲಿ ಜಮ್ಮಾ ವುಳ್ಳವನಾಗಿದ್ದರೆ ಅಂಥಾ ರೈತನು, ಅವನು ವಾಸ ಮಾಡುವ ಗ್ರಾಮದಲ್ಲಿ ಜಿರಾಯಿತ್ ದಾರನೆಂತ ಭಾವಿಸಿ ಮನೆ ತೆರಿಗೆ ಮಾಫಿಗೆ ಹಕ್ಕು ವುಳ್ಳವನಾಗಿರತಕ್ಕದ್ದು."

ತಾರೀಖು 25ನೇ ಮಾರ್ಚ್ 1890.

ಕ್ಯಾಂಪ್ ನಂ. 1166.—ಸ್ 1890ನೇ ಇಸವಿ ಮಾರ್ಚ್ 21ನೇ ಮತ್ತುಂ ಕ್ಯಾಂಪ್ 1072ನೇ ನಂಬರ್ ಇಸ್ತಿಹಾರ್‌ನಾಮೆಯನ್ನ ರದ್ದುಪಡಿಸಿ, ಈ ಕೆಳಗೆ ನಮೂದಾಗುವ ಆಮಲ್ದಾರ್ರುಗಳ ವರ್ಗಾವರ್ಗಿಯನ್ನ ಸರ್ಕಾರ್ ಕೆಲಸಕ್ಕಾಗಿ ಮಾಂಜೂರ್ಮಾಡೋಣಾಗಿರುತ್ತದೆ.

	ಹೆಸರು.	ತಾಲ್ಲೂಕಿನಿಂದ.	ತಾಲ್ಲೂಕಿಗೆ.
1.	ಹೆಚ್. ಆರ್. ಶ್ರೀನಿವಾಸರಾವ್	ಹಾಸನ ತಾಲ್ಲೂಕಿನಿಂದ	ತರೀಕೆರೆ ತಾಲ್ಲೂಕಿಗೆ
2.	ವೀರ್ಭಸಾರಥಯ್ಯಂಗಾರ್	ಹೊಳೇನರಸೀಪುರ	ಹಾಸನ
3.	ಕುಮಾರಸ್ವಾಮಿನಾಯಕ	ಪಾವಗಡ	ಚಿಕ್ಕನಾಯಕನಹಳ್ಳಿ
4.	ಸುಬ್ಬರಾಯಲು ನಾಯಡ್	ಚಳ್ಳಕೆರೆ	ಹೊಳೇನರಸೀಪುರ
5.	ಸಾಲಮ್ಮ ಲೇಟ್	ಅರಕಲಗೂಡು	ಚಳ್ಳಕೆರೆ
6.	ಕೃಷ್ಣಪ್ಪ	ತರೀಕೆರೆ	ಅರಕಲಗೂಡು
7.	ವೈ. ನರಸಂಗ	ಮಂಡ್ಯ	ನಂಜನಗೂಡು
8.	ಶ್ರೀಕಂಠಯ್ಯ	ಚಿಕ್ಕನಾಯಕನಹಳ್ಳಿ	ಮಂಡ್ಯ
9.	ರಾಘವೇಂದ್ರರಾವ್	ನಂಜನಗೂಡು	ಪಾವಗಡ

ತಾರೀಖು 28ನೇ ಫಿಬ್ರವರಿ 1890.

ನಂ. 362.—ಇದರಿಂದ ತಿಳಿಯಪಡಿಸುವದೇನಂದರೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡಿಪ್ಪೋದಲ್ಲಿ ನಾಟಾ ವ ಬಿದರುಗಳ ಪುರೋಕ್ತು ಬಗ್ಯೆ ಇದರಿಂದ ನಮೂದಾಗುವ ದರಗಳು ಫಾರೆಸ್ಟ್ರಿ ಇನ್‌ಸ್ಪೆಕ್ಟರ್ ಜನರಲ್‌ಯವರು ಯಾವ ತಾರೀಖು ಲಾಗಾಯತು ಚಾಲತಿಗೆ ತರುತ್ತಾರೋ ಅದು ಮೊದಲು ಜಾರೀಗೆ ಬರತಕ್ಕದ್ದು.

ನಾಟಾ ವಗೈರೆಗಳ ತಪಸೀಲ್.	ಕ್ಲಾಸ್.	ಸಲೆಅಡಿ 1ಕ್ಕೆ ದರ ರೂ.	ಆ.	ಪೈ.
ತ್ಯಾಗದ ದಿಮ್ಮಿಗಳು	1ನೇ ಕ್ಲಾಸ	1	8	0
ಡಿಟೋ	2ನೇ ಡಿಟೋ	1	4	0
ಡಿಟೋ	3ನೇ ಡಿಟೋ	1	0	0
ಡಿಟೋ	4ನೇ ಡಿಟೋ	0	12	0
ಮನ್ನಾ ಜಾತಿ ದಿಮ್ಮಿಗಳು	1ನೇ ಡಿಟೋ	0	13	0
ಡಿಟೋ	2ನೇ ಡಿಟೋ	0	10	0
ಡಿಟೋ	3ನೇ ಡಿಟೋ	0	8	0
ಉಳಿಸಿಕೊಳ್ಳಲ್ಪಡದೇ ಇರುವಂಥಾದ್ದು	1ನೇ ಡಿಟೋ	0	8	0
ಡಿಟೋ	2ನೇ ಡಿಟೋ	0	6	0
ಡಿಟೋ	3ನೇ ಡಿಟೋ	0	4	0
ತ್ಯಾಗದ ಕೂಚಗಳು 4 ಸಲೆಅಡಿಗಳ ವರಿವಿಗೂ ಇರುವ ಬಾಬತು ..	1ನೇ ಡಿಟೋ	0	8	0
ಡಿಟೋ ಡಿಟೋ	2ನೇ ಡಿಟೋ	0	6	0
ಡಿಟೋ 4 ಸಲೆ ಅಡಿ ಲಾಗಾಯತು 8 ಅಡಿಗಳ ವರಿವಿಗೂ ..	1ನೇ ಡಿಟೋ	0	10	0
ಡಿಟೋ ಡಿಟೋ	2ನೇ ಡಿಟೋ	0	8	0
ಡಿಟೋ 8 ಸಲೆ ಅಡಿ ಲಾಗಾಯತು 12 ಸಲೆ ಅಡಿಗಳ ವರಿವಿಗೂ.	1ನೇ ಡಿಟೋ	0	12	0
ಡಿಟೋ ಡಿಟೋ	2ನೇ ಡಿಟೋ	0	10	0
ಜಂಗ್ಲೀವುರದ ಕೂಚಗಳು 4 ಸಲೆ ಅಡಿಗಳ ವರಿವಿಗೂ ..	1ನೇ ಡಿಟೋ	0	4	0
ಡಿಟೋ ಡಿಟೋ	2ನೇ ಡಿಟೋ	0	2	0
ಡಿಟೋ 4 ಸಲೆ ಅಡಿಗಳ ಲಾಗಾಯತು 8 ಸಲೆ ಅಡಿಗಳ ವರಿವಿಗೆ	1ನೇ ಡಿಟೋ	0	6	0
ಡಿಟೋ ಡಿಟೋ	2ನೇ ಡಿಟೋ	0	4	0
ಡಿಟೋ 8 ಸಲೆ ಅಡಿಗಳ ಲಾಗಾಯತು 12 ಸಲೆ ಅಡಿಗಳ ವರಿವಿಗೆ.	1ನೇ ಡಿಟೋ	0	8	0
ಡಿಟೋ ಡಿಟೋ	2ನೇ ಡಿಟೋ	0	6	0
ಹೆಬ್ಬಿದರು ಯಾ ದೊಡ್ಡ ಬೊಂಬು ಗಳು	100ಕ್ಕೆ	12	0	0
ಕಿರು ಬಿದರು ಯಾ ಸಣ್ಣ ಬೊಂಬುಗಳು	ಡಿಟೋ	5	0	0
ಸರಟು (ಸಣ್ಣ ಫಟ್ಟಿ ಬಿದರು)	ಡಿಟೋ	1	8	0

ತಾರೀಖು 15ನೇ ಮಾರ್ಚ್ 1890.

ನಂ. 367.—1890ನೇ ಇಸವಿ ಮಾರ್ಚ್ 1ನೇ ಮಕ್ಕಂ ಗವರ್ನಮೆಂಟ್ 977—8ನೇ ನಂಬರ್ ಹುಕುಮಿನಲ್ಲಿ ಕಂಡ ಈ ಕೆಳಗೆ ನಮೂದು ಮಾಡಲ್ಪಟ್ಟ ನಿಬಂಧನೆಗಳು ಮೈಸೂರು ಕೋಟೆಯಲ್ಲಿ ಖಂಡಿತವಾಗಿ ಜಾರೀಲಿ ತರತಕ್ಕ ಬಗ್ಯೆ ವಿಧಾಯಕ ಮಾಡಲ್ಪಟ್ಟಿನೆ:—

1. ಸರಕಾರ ಅಥವಾ ಮುನಿಸಿಪಲಿಗೆ ಸೇರಿದ ಯಾ ಮುಂದೆ ಸೇರಲ್ಪಡುವ ಜಮೀನುಗಳ ಮೇಲೆ ಹೊಸ ಕಟ್ಟಡಗಳಿಗೆ ಅವಕಾಶ ಕೊಡಕೂಡದು.

2. ಪ್ರತಿ ಬಂದು ಹಳೇ ಕಟ್ಟಡಗಳನ್ನು ಬಿಚ್ಚಿ ಕಟ್ಟಲ್ಪಡುವ ಸಮಯದಲ್ಲಿ ವಿಶೇಷವಾಗಿ ಫೂಳಿ ಸಂಚಾರಕ್ಕೂ, ಚರಂಡೀ ನೀರು ಸಲೀಸು ಹರಿಯುವದಕ್ಕೂ, ಸಾರ್ವಜ ಅಥವಾ ಕಚಡಾ ಗಾಡಿ ಮುಂತಾದ್ದು ತಿರುಗಾಡುವದಕ್ಕೂ, ಅನುಕೂಲಿಸುವ ಹಾಗೆ ರಸ್ತೆಗಳ ಏರ್ಪಾಟುಗಳು ಮಾಡುವದಕ್ಕೂ, ಕೈ ಬಿಡಕೂಡದು.

3. ಸರಕಾರಿ ಅಲ್ಲದ ಖಾಲಿ ಜಮೀನುಗಳು.

(a) ಪ್ರತ್ಯೇಕವಾಗಿ ವಿಂಗಡವಾದ ಪ್ರದೇಶದಲ್ಲಿದ್ದರೂ ಅಥವಾ ಕಟ್ಟಡಗಳನ್ನು ಕಟ್ಟುವದಕ್ಕೆ ತಕ್ಕದ್ದಾಗಿಲ್ಲದಿದ್ದರೂ ಅಂಥಾವುಗಳ ಮೇಲೆ ಕಟ್ಟಡಗಳನ್ನ ಕಟ್ಟಕೂಡದು, ಅಥವಾ,

(b) ಖಾಲಿಯಾಗಿರುವದಕ್ಕಿಂತ ಕಟ್ಟಡ ಕಟ್ಟುವದೇ ಚಂದವಾಗಿರುವ ಪಕ್ಷದಲ್ಲಿ ಸದರೀ ಖಾಲಿ ಜಮೀನಿನ ಸ್ವಂತಗಾರನು ನಿಯಮಿಸಲ್ಪಟ್ಟ ಕಾಲದೊಳಗಾಗಿ ಕಟ್ಟಡವನ್ನು ಕಟ್ಟುವಂತೆ ಅಪೇಕ್ಷಿಸಲ್ಪಡತಕ್ಕದ್ದು. ಅದಕ್ಕೆ ತಪ್ಪುವ ಪಕ್ಷದಲ್ಲಿ ಮನೆಗಳನ್ನು ಕಟ್ಟುವ ಬಗ್ಯಾಗಿ ಸದರೀ ಜಮೀನುಗಳು ಕಾನೂನಿನ ಪ್ರಕಾರ ವ್ಯವಸ್ಥೆ ಮಾಡಲ್ಪಡತಕ್ಕದ್ದು.

4. ವಿಪ್ಪ ಖಾಲೀ ಜಾಗಾಗಳು, ಅವುಗಳ ಮೇಲೆ ಕಟ್ಟಡಗಳನ್ನು ಕಟ್ಟುವ ವರಿಗೂ ಕಚಡಾ ಯಿಲ್ಲದಂತೆಯೂ ಅಸಹ್ಯಕರವಾದ ಗಿಡಗಿಟ್ಟಿಗಳು ಬೆಳೆಯದಂತೆಯೂ ಉಸ್ತುವಾರಿಯಲ್ಲಿಡತಕ್ಕದ್ದು.

5. ಯಲ್ಲಾ ಹೊಸಕಟ್ಟಡಗಳ ವಿಷಯದಲ್ಲಿಯೂ ಕಾಮುಗಾರಿಗೆ ಪುರುವಾಗುವದಕ್ಕೆ ಮುಂಚಿತವಾಗಿಯೇ ಉದ್ದೇಸಿಸಲ್ಪಟ್ಟವುಗಳ ಮುಂಭಾಗವು ಬಚ್ಚಲು ನೀರು ಹೋಗುವ ಮತ್ತು ಕಚೆರಾ ನಿವರ್ತಿಯಾಗುವ ವಿರ್ಪಾಟುಗಳು ಕ್ರಮುವಾದ ನಕ್ಷೆಮೇಲೆ ಬರಹಮೂಲಕವಾಗಿ ಸ್ಯಾನಿಟೆರಿ ಇಂಜನೀರ್ರವರಿಂದ ಮಂಜೂರ್ ಮಾಡಲ್ಪಡತಕ್ಕದ್ದು. ಮನೆ ಕಟ್ಟುವದಕ್ಕೆ ಮಾಡುವ ದರಖಾಸ್ತುಗಳನ್ನು ಒಂದು ತಿಂಗಳಿಗೆ ಮಿಾರದ ಕಾಲದಲ್ಲಿ ಅಂಗೀಕಾರವಾಗಲಿ ಅಥವಾ ತಿರಸ್ಕಾರವಾಗಲಿ ಮಾಡತಕ್ಕದ್ದು.

6. ಸ್ಯಾನಿಟೆರಿ ಇಂಜನೀರ್ರವರು ಪದೆ ಪದೆ ಸಾಧ್ಯವಾದ ಮಟ್ಟಗೂ ಕನಿಷ್ಟಪಕ್ಷ ಯರಡು ವಾರಕ್ಕೊಂದಾವರ್ತಿ ಯಾದರೂ ಕೋಟೆಯನ್ನು ನೋಡತಕ್ಕದ್ದು, ಮತ್ತು ತನಿಖೆಯಲ್ಲಿ ಕಂಡುಬಂದ ಫಲಿತಾಂಶವನ್ನು ಗವರ್ಮೆಂಟಿನವರಿಗೂ ಮ್ಯುನಿಸಿಪಲ್ ಪೈಸಿಣಿಂಟರವರಿಗೂ, ಹದಿನೈದು ದಿವಸಕ್ಕೊಂದಾವರ್ತಿ ಕಳುಹಿಸಿಕೊಡಬೇಕು, ಸದರೀ ರಿಪೋರ್ಟು ಮೇಲಿಕಂಡ ನಿಬಂಧನೆಗಳು ಜಾರೀಯಲ್ಲಿ ಯಿರುತ್ತಿರುವದನ್ನು ಸಾಮಾನ್ಯವಾಗಿ ಆರೋಗ್ಯಸ್ಥಿತಿಯನ್ನು ಮತ್ತು ಅವಶ್ಯಕವಾದ ಕಾರ್ಯಗಳನ್ನು ಸಹ ತೋರಿಸುತ್ತಿರಬೇಕು.

7. ಗವರ್ಮೆಂಟಿನವರ ಸ್ಪಷ್ಟವಾದ ಮಂಜೂರಾತಿ ಯಿಲ್ಲದೆ ಈ ನಿಬಂಧನೆಗಳಿಗೆ ಯಾವ ವಿಧವಾದ ವಿನಾಯಿತಿಯೂ ಮಾಡಲ್ಪಡಕೂಡದು.

ತಾರೀಖು 10ನೇ ಮಾರ್ಚಿ 1890.

ನಂ. 393.—ಕೋಟೆಗಳ ಯಾ ಕೆರೆಗಳ ಕಲ್ಲುಗಳನ್ನ ಉಪಯೋಗಿಸಿಕೊಳ್ಳುವ ವಿಷಯದಲ್ಲಿ ಸ್ ೧೮೯೦ನೇ ಇಸವಿ ಮಾರ್ಚಿ 8ನೇ ಮುರ್ತುಮಿನ 9761–2–169ನೇ ನಂಬರುಳ್ಳ ಗವರ್ಮೆಂಟ್ ಆರ್ಡರಿನಲ್ಲಿ ವಿಧಿಸೋಣಾದ ಇದರಡಿ ಬರುವ ನಿಬಂಧನೆಗಳನ್ನ ಸಮಸ್ತ ಜನಗಳ ತಿಳುವಳಿಕೆ ಬಗ್ಯೂ ವ ಆಚರಣೆ ಬಗ್ಯೂ ಪ್ರಕಟಪಡಿಸೋಣಾಗಿರುತ್ತದೆ.

1. ಬಳ್ಳೇ ಸ್ಥಿತಿಯಲ್ಲಿರುವ ಯಾ ಶಿಕಸ್ತಾಗಿರುವ ಯಾವ ಕೋಟೆ ಯಾ ಕೆರೆಗಳ ಕಲ್ಲುಗಳನ್ನಾಗಲಿ ಯಾವ ಪಬ್ಲಿಕ್ (ಅಂದರೆ ಸರ್ಕಾರಿ ಮ್ಯುನಿಸಿಪಲ್ ವ ಸ್ಥಳಿಕ ಕಾಮುಗಾರಿಗಳಿಗೋಸ್ಕರವಾಗಿಯಾಗಲಿ, ಯಾ ಇತರ ಉದ್ದೇಶಗಳಿಗಾಗಿಯಾಗಲಿ, ಬೇಕಾಗಿರುವ ಕಲ್ಲುಗಳ ಅಂದಾಜು ತೇದಾದು ವ ಅಂದಾಜು ಮೊಬಲಗ್ ತಪಶೀಲ್ ನಮೂದಿನಿಂದ ಬಂದು ತಖ್ತೆನಿಸಿ ಡೆಪ್ಯುಟಿ ಕಮ್ಮಿಷನರಿಗೆ ದರಖಾಸ್ತು ಮಾಡಿ ಅವರು ಅಪ್ಪಣೆ ಕೊಟ್ಟ ಹೊರ್ತು ಉಪಯೋಗಿಸಿಕೊಳ್ಳಕೂಡದು.

2. ಅಂಥಾ ಅಪ್ಪಣೆಯು ಕೋರಲ್ಪಟ್ಟುಗ, ಕಲ್ಲುಗಳನ್ನ ಸ್ವಾಧೀನಿಸಿ ಉಪಯೋಗಿಸಿಕೊಳ್ಳಲಿಕ್ಕೆ ಆಕ್ಷೇಪಣೆ ಯೇನಾದರು ಉಂಟೆಯಂತ ರೆವಿನ್ಯೂ ಇಲಾಖೆಯವರು ಕೂಲ್ಲೆ ವಿಚಾರಣೆ ಮಾಡಬೇಕು.

3. ಯಾವ ಆಕ್ಷೇಪಣೆಯೂ ಇಲ್ಲದೆ ಇದ್ದಲ್ಲಿ ದರಖಾಸ್ತಿನಂತೆ ಕಲ್ಲುಗಳನ್ನ ಸ್ವಾಧೀನಿಸಿ ಉಪಯೋಗಿಸಿಕೊಳ್ಳುವಂತೆ ತಕ್ಷಣವೆ ಅವಕಾಶ ಕೊಡಲ್ಪಟ್ಟು ಕಲ್ಲುಗಳ ಖರೀದಿ ಕ್ರಮವಾಗಿ ಗವರ್ಮೆಂಟ್ ರೆವಿನ್ಯೂ ಇಲಾಖೆಗೆ ಜಮಾ ದಾಖಲಾಗತಕ್ಕದ್ದು.

4. ಕಲ್ಲುಗಳ ಖರೀದಿ ವಿಷಯದಲ್ಲಿ ಅವುಗಳಿಗಾಗಿ ದರಖಾಸ್ತು ಮಾಡುವ ಆಫಿಸರರಿಗೂ ಡೆಪ್ಯುಟಿ ಕಮ್ಮಿಷನರವರಿಗೂ ಪರಸ್ಪರ ಭಿನ್ನಾಭಿಪ್ರಾಯ ಉಂಟಾದರೆ, ಅದೇ ಕಾರಣದಿಂದ ದರಖಾಸ್ತನ್ನ ಮಂಜೂರ್ಮಾಡಲಿಕ್ಕೆ ಸಾವಕಾಶವಾಗಕೂಡದು. ಯೆಂಥಾ ಸಂದರ್ಭಗಳಲ್ಲಿ ಅಪ್ಪಣೆ ಮೊದಲು ಕೊಡಲ್ಪಟ್ಟು ಅನಂತರ ಖರೀದಿ ವಿಷಯವು ಗವರ್ಮೆಂಟಿನವರ ಹುಕುಮಿನ ಬಗ್ಯೆ ರಿಪೋರ್ಟು ಮಾಡಲ್ಪಡತಕ್ಕದ್ದು.

5. ಯಾವ ಕಾಮುಗಾರಿಗೋಸ್ಕರ ಯಿಂಥಾ ಕಲ್ಲುಗಳು ಉಪಯೋಗಿಸಬೇಕಾಗಿರುತ್ತದೆಯೋ ಅಂಥಾ ಕಾಮುಗಾರಿಗಳಿಗೆ ಸಂಬಂಧಪಟ್ಟ ದರೋಬಸ್ತು ಪಬ್ಲಿಕ್ವರ್ಕ್ಸ್ ಇಲಾಖೆಯ ಅಂದಾಜು ಪಟ್ಟಗಳಲ್ಲಿಯೂ ಡಿಟೋ ಕಲ್ಲುಗಳ ಖರೀದಿಯು ನಮೂದಿಸಲ್ಪಟ್ಟಿರತಕ್ಕದ್ದು, ಅಂಥಾ ಕಾಮುಗಾರಿಗಾಗಿ ಕಂಟ್ರಾಕ್ಟು ಕೊಡುವಾಗ, ಕೋಟೆ ವ ಕೆರೆಗಳಲ್ಲಿರುವ ಗವರ್ಮೆಂಟಿನ ಕಲ್ಲುಗಳನ್ನ ಉಪಯೋಗಿಸಿಕೊಳ್ಳುವಂತೆ ಕಂಟ್ರಾಕ್ಟರಿಗೆ ಅಪ್ಪಣೆ ಕೊಡುವಣದರ ದೆಶೆಯಿಂದ ಕಂಟ್ರಾಕ್ಟರಿಗೆ ಜಾಸ್ತಿ ಫಾಯಿದೆ ಉಂಟುಗದಂತೆ ನಿಗೇಯಲ್ಲಿ ಯಿರತಕ್ಕದ್ದು.

6. ಈ ಮೇಲ್ಕಂಡ ರೂಲ್ಸಗಳು, ಸ್ ೧೮೭೫ನೇ ಇಸವಿ ಜುಲೈ 19ನೇ ಮುರ್ತುಂ 3276—138ನೇ ನಂಬರುಳ್ಳ ಮತ್ತು ಸ್ ೧೮೮೦ನೇ ಇಸವಿ ಜುಲೈ 27ನೇ ಮುರ್ತುಮಿನ 2484—353ನೇ ನಂಬರುಳ್ಳ ಲೇಟ್ ಚೀಫ್ ಕಮ್ಮಿಷನರವರ ಪ್ರೊಸೀಡಿಂಗ್ಸಗಳಲ್ಲಿ ನಮೂದಿರುವ ನಿಬಂಧನೆಗಳಿಗೆ ಉಪನಿಬಂಧನೆಗಳಾಗಿ ತಿಳಿಯತಕ್ಕದ್ದು.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರಿಯಿರುವ ನಡೆವಳಿಕವನ್ನ ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಚ್ಛೈವುಳ್ಳ ಚಂದದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗ್ಗಾಗಿ ಕೊಡುವ ವಾಡಿಕೆಯಾದ ಆಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೀತಿಯನ್ನ ತಯಾರ್ಮಾಡಿಕೊಡತಕ್ಕದು.

ಚಂದಾದಾರನು ಡ್ಯುಪ್ಲಿಕೇಟ್ ರೀತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರೀತಿಯನ್ನು ತನ್ನ ದರಖಾಸ್ತಿನ ಸಂಗಡೆ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೆಜರಿ ರೀತಿಯನ್ನು ಹಣಬಂದಂತೆ ಒಪ್ಪಿಕೊಳ್ಳುವರು.

ತಾರೀಖು 13ನೇ ಮಾರ್ಚಿ 1890.

ನಂ. 365.—ಈವರೊಗ್ಗಾ ಡಿಸ್ಟ್ರಿಕ್ಟ್ ಸಬ್ ಆಸಿಸ್ಟೆಂಟ್ ಕಮಿಸರೇಟರ್ ಮೆ|| ಯಂ. ವೆಂಕಟನಾರಣಪ್ಪನವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 366.—ಅದರಡಿ ಬರುವ ಇಂಡ್ಯೂಗವರ್ನಮೆಂಟ್ ಫರ್ದ್ ಯಲಾಖೆಯ ಇಸ್ತಿಹಾರ್‌ನಾಮೆಯನ್ನು ಪುಸ್ಥ್ ಪ್ರಕಟಿಸೋಣಾಗಿರುತ್ತೆ.

ತಾರೀಖು 1ನೇ ಜನವರಿ 1890.

ಮೈಸೂರು ಕೀಮೆಯಲ್ಲಿ ಕೆಲವು ಆಫಿಸರುಗಳು ತಮ್ಮತಮ್ಮ ಸರಹದ್ದಿನೊಳಗೆ ಮದುವೆಯ ರಿಜಿಸ್ಟ್ರಾರುಗಳಾಗಿ ಮೊಕರರ್ರ್ಯಾಡಿಸಲ್ಪಟ್ಟು ಆವರು ತಮ್ಮತಮ್ಮ ಸರಹದ್ದಿನೊಳಗೆ ನಡೆಯುವ ನೆಟಿವ್ ಕ್ರಿಶ್ಚಿಯನ್ ಜನಗಳ ಮದುವೆಬಗ್ಯಾಗಿ ಸರಟಿಫಿಕೇಟ್‌ಗಳನ್ನು ಕೊಡಲಿಕ್ಕೆ ಅಧಿಕಾರ ಹೊಂದಿರತಕ್ಕದ್ದೆಂದು ನಮೂದಿರುವ ಸ್ ೧೮೭೫ನೇ ಇಸವಿ ಆಗಸ್ಟು 31ನೇ ಮುಕ್ತಂ 1763 G ನಂಬರುಳ್ಳ ಇಂಡ್ಯ ಗವರ್ನಮೆಂಟ್ ಫರ್ದ್ ಯಿಲಾಖಾ ಇಸ್ತಿಹಾರನ್ನು, ಮೈಸೂರು ಕೀಮೆಯ ಆಸಿಸ್ಟೆಂಟ್ ರೆಸಿಡೆಂಟರು ಸ್ ೧೮೯೦ನೇ ಇಸವಿ ಜನವರಿ 16ನೇ ಮುಕ್ತಂ 101—224—A 5ನೇ ನಂಬರುಳ್ಳ ಲೆಟರಿನಲ್ಲಿ ಸೂಚಿಸಿದ ಮೇರಿಗೆ, ಗವರ್ನರ್ ಜನರ್ ಇನ್ ಕೌನ್ಸಿಲ್ಲವರು ರದ್ದುಪಡಿಸಿರುತ್ತಾರೆ.

ತಾರೀಖು 14ನೇ ಮಾರ್ಚಿ 1890.

ನಂ. 364.—ಮೆ|| ಟಿ. ಸೈಯ್ಯದ್ ನೀರುದ್ದೀನ್‌ಯವರು, ಬೆಂಗಳೂರು ಟವ್ನ್ ಮಾಜಿಸ್ಟ್ರೇಟ್ ಕೋರ್ಟು ವಾರ್ಜನ್ನು ಸ್ ೧೮೯೦ನೇ ಇಸವಿ ಫಿಬ್ರವರೀ 20ನೇ ತಾರೀಖಿನ ಪೂರ್ವಾನ್ಹದಲ್ಲಿ ಮೆ|| ಜೆ. ರಘುನಾಥರಾಯರಿಗೆ ವೊಪ್ಪಿಸಿರುತ್ತಾರೆ.

ತಾರೀಖು 16ನೇ ಮಾರ್ಚಿ 1890.

ಕ್ಯಾಂಪ್ ನಂ. 979.—ಮೈಸೂರು ಡಿಸ್ಟ್ರಿಕ್ಟ್ ವ ಸೆಷ್ಷನ್ ಜಡ್ಜ್ ಮೆ|| ಯಸ್. ಹೇಮಾಜಿರಾಯರಿಗೆ, 1890ನೇ ಇಸವಿ ಮಾರ್ಚಿ 17ರ ಲಾಗಾಯಿತು ಯೇಪ್ರಿಲ್ 2ನೇ ತಾರೀಖುವರಿವಿಗೆ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆ|| ಹೇಮಾಜಿರಾಯರು ರಜಾದಮೇಲೆ ಯಿರುವಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿಗೂ (ಮೈಸೂರ ಸಬ್ ಜಡ್ಜ್) ಮೆ|| ಪಿ. ಶ್ರೀನಿವಾಸಯ್ಯಂಗಾರ್ ಮೈಸೂರ ಡಿ|| ವ ಸೆಷ್ಷನ್ ಜಡ್ಜ್ ಕೆಲಸವನ್ನು ಆಫ್ಟಿಂಗ್ ತರೀಖು ನೋಡುವಂತೆ ಮೊಕರರ್ರ್ಯಾಡಿರುತ್ತಾರೆ.

ತಾರೀಖು 17ನೇ ಮಾರ್ಚಿ 1890.

ನಂ. 368.—ಡಿ|| ಟ್ರೆಜರಿ ಇನ್‌ಸ್ಪೆಕ್ಟರ್ ಜನರಲ್ ಕಮಿಷನರ್ ಮೆ|| ಈ. ಚಿದಂಬ್ರಯ್ಯರ್‌ಯವರು, ಮೈಸೂರ ಡಿಸ್ಟ್ರಿಕ್ಟ್ ಟ್ರೆಜರಿ ವಾರ್ಜನ್ನು 1890ನೇ ಇಸವಿ ಫಿಬ್ರವರಿ 26ನೇ ತಾರೀಖಿನ ಮಧ್ಯಾನ್ಹದ ಪೊಲೀಸಿಬಾಖಾ ಪ್ರೊಬೇಷನರ್ ಮೆ|| ಯಂ. ನಂಜರಾಜೆ ಅರಿಸಿನವರಿಗೆ ವೊಪ್ಪಿಸಿರುತ್ತಾರೆ.

ಕ್ಯಾಂಪ್ ನಂ. 1001.— ಅಸಿಸ್ಟೆಂಟ್ ಸರ್ಜನ್ ಎ. ಯಸ್. ಫರ್‌ನಾಂಡೆಜ್ ಯಂ. ಡಿ. ಯವರಿಗೆ, ಸ್ ೧೮೮೯ನೇ ಇಸವಿ ನವಂಬರ್ 6ನೇ ಮುಕ್ತಂ 758ನೇ ನಂಬರ್ ಇಸ್ತಿಹಾರಿನಲ್ಲಿ ಕೊಡೋಣಾಗಿದ್ದ ಯರಡು ತಿಂಗಳ ಪ್ರಿವೀಲೀಜ್ ರಜಾಕ್ಕೆ ಚಾಸ್ತಿಯಾಗಿ 4 ದಿವಸಗಳ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಟಿ. ಆನಂದರಾವ್,

ಚೀಫ್ ಸೆಕ್ರಿಟೆರಿ.